**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ. 1878/2021**

ಪಿ.ಡಬ್ಲ್ಯೂ.1

ದಿನಾಂಕ 05-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿಯ ಪರ ವಕೀಲರಿಂದಃ**

ಪ್ರಸ್ತುತ ಪ್ರಕರಣವನ್ನು ಆರೋಪಿಯು ನನಗೆ ಚೆಕ್ಕನ್ನು ನೀಡಿದ್ದು , ಸದರಿ ಚೆಕ್ಕನ್ನು ನಾನು ಬ್ಯಾಂಕಿನಲ್ಲಿ ಹಾಜರು ಮಾಡಿದಾಗ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಹಿಂಬರಹ ಬಂದ ಕಾರಣ ದಾಖಲು ಮಾಡಿರುತ್ತೇನೆ. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಸ್ತುತ ಫಿರ್ಯಾದಿಯ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಸದರಿ ಫಿರ್ಯಾದಿ ಮಾಹಿತಿಯನ್ನು ನನ್ನ ವಕೀಲರು ನನಗೆ ಓದಿ ಹೇಳಿರುತ್ತಾರೆ. ಅದರಂತೆ ನನ್ನ ವಕೀಲರು ನನ್ನ ಸಾಕ್ಷಿ ಪ್ರಮಾಣಪತ್ರದ ಮಾಹಿತಿಯನ್ನು ಓದಿ ನನಗೆ ಕನ್ನಡದಲ್ಲಿ ಹೇಳಿರುತ್ತಾರೆ ಎಂದರೆ ಹೌದು. ಆರೋಪಿಯು ಬನಹಟ್ಟಿ ಊರಿನವರು. ಆರೋಪಿಯು ಆಸಂಗಿಯವನೋ ಅಥವಾ ಬನಹಟ್ಟಿಯವನೋ ಎಂಬ ಪ್ರಶ್ನೆಗೆ ಸಾಕ್ಷಿಯು ಬನಹಟ್ಟಿಯವನು ಎಂದು ನುಡಿಯುತ್ತಾರೆ. ನಾನು ಆಸಂಗಿ ಊರಿನವನು. ಆರೋಪಿಯು ನನಗೆ ಮೊದಲಿನಿಂದಲೂ ಪರಿಚಯ. ನನ್ನ ಫಿರ್ಯಾದಿಯ 2 ನೇ ಖಂಡಿಕೆಯಲ್ಲಿ ನಾನು ಮತ್ತು ಅರೋಪಿಯು ಹನಗಂಡಿ ಗ್ರಾಮದ ಕಾಯಂ ವಾಸಿಗಳು ಎಂದು ನಜರ್ ಚುಕ್ಕಿನಿಂದ ನಮೂದಾಗಿರುತ್ತದೆ. ನಾನು ಪುಸ್ತಕ ಅಂಗಡಿಯ ವ್ಯಾಪಾರಿ . ನಾನು ಒಕ್ಕಲುತನ ಸಹ ಮಾಡುತ್ತೇನೆ. ದಿಃ 27-10-2021 ರಂದು ಆರೋಪಿಯು ನನ್ನ ಕಡೆಯಿಂದ ರೂ.6,50,000/- ಅನ್ನು ಪಡೆದುಕೊಂಡಿರುತ್ತಾನೆ. ಆರೋಪಿ 2021 ನೇ ಇಸವಿಯಲ್ಲಿ ನನಗೆ ಪರಿಚಯ ಇರದ ಕಾರಣ ಆರೋಪಿ ನನ್ನಿಂದ ಸದರಿ ಹಣವನ್ನು ಪಡೆದಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಅವನ ಮನೆಯ ಪ್ರಾಂಪಚಿಕ ಅಡಚಣೆಯ ಸಲುವಾಗಿ ಹಣವನ್ನು ನೀಡಿರುತ್ತೇನೆ. ಸಾಮಾನ್ಯವಾಗಿ ರೂ.6,50,000/- ಹಣವನ್ನು ನೀಡುವಾದ ನಿಖರವಾದ ಕಾರಣವನ್ನು ಕೇಳಿ ಹಣವನ್ನು ಕೊಡುತ್ತಾರೆ ಎಂದರೆ ಹೌದು. ಆರೋಪಿಗೆ ಯಾವುದೇ ರೀತಿ ಅಡಚಣೆ ಇರಲಿಲ್ಲ ಮತ್ತು ಯಾವುದೇ ಹಣವನ್ನು ನನ್ನ ಕಡೆಯಿಂದ ಪಡೆದುಕೊಂಡಿಲ್ಲವಾದರೂ ನಾನು ಆರೋಪಿಯ ವಿರುದ್ದ ಸುಳ್ಳು ಫಿರ್ಯಾದಿಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2021 ನೇ ಇಸವಿಯಲ್ಲಿ ಕೊರೋನಾ ಇದ್ದ ಕಾರಣಕ್ಕೆ ಯಾವುದೇ ಹಣದ ವ್ಯವಹಾರ ಆಗುವ ಸಾಧ್ಯತೆಗಳು ಇರದೇ ಇದ್ದರು ನಾನು ಆರೋಪಿಗೆ ಸದರಿ ಹಣವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸದರಿ ಹಣವನ್ನು ಕೊಡುವ ಕಾಲಕ್ಕೆ ಯಾವುದೇ ಬಾಂಡ ಮತ್ತು ಪ್ರಾಮಿಜರಿ ನೋಟ ಬರೆದುಕೊಂಡಿರುವುದಿಲ್ಲ, ಕಾರಣ ಆರೋಪಿ ನನಗೆ ಮೊದಲಿನಿಂದಲು ಪರಿಚಯಿ.

2. ನಾನು ಆರೋಪಿಗೆ ಸದರಿ ಹಣ ನೀಡುವ ಕಾಲಕ್ಕೆ ಯಾವುದೇ ಕಾಗದ ಪತ್ರವನ್ನು ಬರೆಯಿಸಿಕೊಳ್ಳಲು ಅಡಚಣೆ ಇರಲಿಲ್ಲ ಎಂದರೆ ಹೌದು. ಆರೋಪಿಯು ಸದರಿ ಹಣವನ್ನು ನನ್ನಿಂದ ಪಡೆದುಕೊಂಡು ನಾನು ಬೇಡಿದ ಕಾಲಕ್ಕೆ ಹಣವನ್ನು ಮರಳಿ ಕೊಡುವುದಾಗಿ ಹೇಳಿದ್ದನು. ಸಾಕ್ಷಿಯು ಫಿರ್ಯಾದಿಯಲ್ಲಿ ನಾನು ಆರೋಪಿಯು ಸದರಿ ಹಣವನ್ನುಪಡೆದು 4 ತಿಂಗಳೊಳಗಾಗಿ ಮರಳಿ ಕೊಡತ್ತೇನೆ ಎಂದು ಹೇಳಿದ್ದನು ಎಂದು ಬರೆಯಿಸಿದ್ದು ಸರಿಯಲ್ಲ, ನಾನು ಬೇಡಿದ ಕಾಲಕ್ಕೆ ಆರೋಪಿಯು ಸದರಿ ಹಣವನ್ನು ವಾಪಸ್ಸು ಕೊಡುವುದಾಗಿ ಹೇಳಿದ್ದನು ಎಂಬುದು ಸರಿ ಇರುತ್ತದೆ. ಆರೋಪಿಯು ಕಿರಾಣಿ ಅಂಗಡಿ ಮತ್ತು ಉಪ್ಪಿನಕಾಯಿಯ ಹೋಲಸೇಲ್ ವ್ಯಾಪಾರವನ್ನು ಮಾಡುತ್ತಾನೆ . ನಾನು ಆರೋಪಿಯು ಹೋಲಸೇಲ ವ್ಯಾಪಾರ ಮಾಡುತ್ತಿರುವುದು ಮತ್ತು ಇಂತಹ ಸ್ಥಳದಲ್ಲಿ ಆತನ ಅಂಗಡಿ ಇರುವುದರಿ ಕುರಿತು ಫಿರ್ಯಾದಿಯಲ್ಲಿ

ಬರೆಯಿಸಿರುವುದಿಲ್ಲ ಎಂದರೆ ಸರಿ . ಈಗ ಆರೋಪಿಯು ಆಸಂಗಿ ಊರಿನಲ್ಲಿ ಖಾನಾವಳಿ ಇಟ್ಟಿರುತ್ತಾನೆ. ಆರೋಪಿಯ ಹೋಲಸೇಲ್ ವ್ಯಾಪಾರದ ಅಂಗಡಿಯು ಎಲ್ಲಿ ಇತ್ತು ಎಂಬ ಮಾಹಿತಿ ನನಗೆ ಇರಲಿಲ್ಲ. ದಿಃ 27-01-2021 ರಂದು ಆರೋಪಿಯು ನನಗೆ ಚೆಕ್ ಅನ್ನು ನೀಡಿದ್ದನು. ಸದರಿ ಚೆಕ್ಕನ್ನು ಆರೋಪಿಯು ಬನಹಟ್ಟಿಯಲ್ಲಿರುವ ನನ್ನ ಅಂಗಡಿಗೆ ಬಂದು ಕೊಟ್ಟಿರುತ್ತಾನೆ. ಆರೋಪಿಯು ನನಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಜೊತೆಗೆ ಆತನ ಗೆಳೆಯರಾದ ವೆಂಕಟೇಶ ನಾಯಕವಾಡಿ , ಮಲ್ಲಪ್ಪ ಹಿಟ್ಟನಗಿ ರವರು ಬಂದಿದ್ದರು . ಆರೋಪಿಯು ಸದರಿ ಚೆಕ್ಕನ್ನು ಬೆಳಿಗ್ಗೆ 10 ರಿಂದ 11 ಗಂಟೆ ಸುಮಾರಿಗೆ ತಂದು ಕೊಟ್ಟಿರುತ್ತಾನೆ. ಅದೇ ದಿನ ನಾನು ಆರೋಪಿಯು ನೀಡಿದ ಚೆಕ್ಕನ್ನು ಬ್ಯಾಂಕಿಗೆ ಹಾಜರು ಮಾಡಲು ಕೊಟ್ಟು ಕಳುಹಿಸಿರುತ್ತೇನೆ. ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಜರು ಮಾಡಿದ ಎರಡು ದಿನಗಳ ನಂತರ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ತಿಳಿದು ಬಂದಿರುತ್ತದೆ. ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಜರು ಮಾಡಿದಾಗ Account closed ಅಂತ ಬಂದಿರುತ್ತದೆ. ನನಗೆ ಪ್ರಸ್ತುತ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ನಾನು ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಆರೋಪಿಯು ಸದರಿ ಚೆಕ್ಕನ್ನು ನನ್ನ ಸಮಕ್ಷಮ ಬರೆದಿರುತ್ತಾನೆ. ಸದರಿ ಚೆಕ್ ICICI ಬ್ಯಾಂಕ್ , ರಬಕವಿ ಶಾಖೆಯದು ಇತ್ತು. ಆರೋಪಿಯು ರೂ.6,50,000/- ನಮೂದಿಸಿದ ಚೆಕ್ಕನ್ನು ನನಗೆ ನೀಡಿದ ನಂತರ ನಾನು ನನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರನ ಮೂಲಕ ಬ್ಯಾಂಕಿಗೆ ಚೆಕ್ಕನ್ನು ಹಾಜರು ಮಾಡಲು ಕಳುಹಿಸಿರುತ್ತೇನೆ. ನಿಪಿ-1 ರಲ್ಲಿರುವ ಸಹಿ ಆರೋಪಿಯದು ಅಲ್ಲ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿ ನಮೂದಿಸಿದ ಹಸ್ತಾಕ್ಷರಗಳು ಬರೆದ ಮಸಿ ಮತ್ತು ಸಹಿಯ ಹಾಕಿದ ಮಸಿ ಬೇರೆ ಬೇರೆ ಇದೆ ಎಂದರೆ ಸಾಕ್ಷಿಯು ಆರೋಪಿಯು ಸದರಿ ಚೆಕ್ಕನ್ನು ಬರೆದುಕೊಟ್ಟಿದ್ದು ಅದನ್ನು ನಾನು ಬ್ಯಾಂಕಿಗೆ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ರೂ.6,50,000/- ಹಣವನ್ನು ಆರೋಪಿಗೆ ಪ್ರಾಪಂಚಿಕ ಅಡೆಚಣೆ ಸಲುವಾಗಿ ಕೈಗಡ ಹಣವಾಗಿ ಕೊಟ್ಟಿರುತ್ತೇನೆ. ಸದರಿ ಚೆಕ್ ಬೌನ್ಸ್ ಆದ 8 -10 ದಿನಗಳ ನಂತರ ವಕೀಲರ ಮುಖಾಂತರ ಆರೋಪಿಗೆ ನೋಟೀಸ್ಸನ್ನು ಕೊಟ್ಟಿರುತ್ತೇನೆ. ಪಿರ್ಯಾದಿಯ ಖಂಡಿಕೆ 4 ರಲ್ಲಿ ಸದರಿ ಚೆಕ್ ಹಾಜರು ಮಾಡಿದಾಗ ಸಾಕಷ್ಟು ಹಣ ಇಲ್ಲ ಎಂಬ ಮಾಹಿತಿ ಇತ್ತು ಎಂದು ಬರೆಸಿದ್ದು ಅದರಂತೆ ಖಂಡಿಕೆ 4 ರಲ್ಲಿ ಸದರಿ ಚೆಕ್ ಅನ್ನು ಹಾಜರು ಮಾಡಿದಾಗ Account closed ಅಂತ ಬರೆಯಿಸಿರುತ್ತೇನೆ ಎಂದರೆ ಸಾಕ್ಷಿಯು ಸಾಕಷ್ಟು ಹಣ ಇಲ್ಲ ಅಂತಲೇ ಬಂದಿತ್ತು ಎಂದು ನುಡಿಯುತ್ತಾರೆ. ಬಸವರಾಜ ಬಂದಿ ಎಂಬುವವರ ಹೆಸರು ನಾನು ಕೇಳಿರುವುದಿಲ್ಲ. ಆರೋಪಿ ಮತ್ತು ಬಸವರಾಜ ಬಂದಿಯವರು ಆತ್ಮೀಯ ಸ್ನೇಹಿತರು ಎಂದರೆ ಇರಬಹುದು. ಬಸವರಾಜ ಬಂದಿ ಮತ್ತು ನನ್ನ ಜೊತಗೆ ಇದ್ದ ವ್ಯವಹಾರ ಬೇರೆ ಮತ್ತು ನನಗೆ ಮತ್ತು ಆರೋಪಿಗೆ ಇದ್ದ ವ್ಯವಹಾರ ಬೇರೆ . ಸದರಿ ಬಸವರಾಜ ಬಂದಿಯವರು ಮೂರು ತಿಂಗಳ ಹಿಂದೆ ಮೃತರಾಗಿದ್ದರ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ಬಸವರಾಜ ಬಂದಿಯವರು ಸಹ ನನಗೆ ಹಣ ವಾಪಸ್ಸು ಕೊಡುವುದಿದ್ದು , ಅವರ ವಿರುದ್ದ ಇದೇ ನ್ಯಾಯಾಲಯದಲ್ಲಿ ಪಿರ್ಯಾದಿಯನ್ನು ದಾಖಲಿಸಿರುತ್ತೇನೆ ಎಂದರೆ ಹೌದು. ಬಸವರಾಜ ಬಂದಿಯವರ ಹತ್ತಿರ ಆರೋಪಿಯ ಚೆಕ್ಕುಗಳು ಇದ್ದು ಸದರಿ ಆರೋಪಿಯು ಚೆಕ್ಕನ್ನು ದುರುಪಯೋಗ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದ ಖಂಡಿಕೆ 13 ರಲ್ಲಿ ಹಾಗೂ ಪಿರ್ಯಾದಿಯ ಖಂಡಿಕೆ 7 ರಲ್ಲಿ ಆರೋಪಿಯು ಚೆಕ್ಕಿನ ಮೊತ್ತವಾದ ರೂ.90,000/- ಅನ್ನು ಕೊಟ್ಟಿರುವುದಿಲ್ಲ ಆದಕಾರಣ ಪ್ರಸ್ತುತ ಪಿರ್ಯಾದಿಯನ್ನು ದಾಖಲಿಸಿರುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. 2021 ನೇ ಇಸವಿಯಲ್ಲಿ ನನಗೆ ಆರೋಪಿಯು ಪರಿಚಯ ಇರದೇ ಇದ್ದರು ಸಹ ಬಸವರಾಜ ಬಂದಿಯವರ ಹತ್ತಿರ ಇದ್ದ ಖೊಟ್ಟಿ ಚೆಕ್ಕನ್ನು ಪಡೆದುಕೊಂಡು ಆರೋಪಿಯಿಂದ ಹಣವನ್ನು ದೋಚಬೇಕೆಂಬ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.